**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ವಿ.ಸಂಕನೂರ ಇವರ ನಿಯಮ 330ಕ್ಕೆ ಉತ್ತರ ನೀಡುವ ಕುರಿತು.**

**ವಿಷಯ :-**

ಕರ್ನಾಟಕ ರಾಜ್ಯದಲ್ಲಿ ಹೊಸ ಸರ್ಕಾರ ರಚನೆ ಆದನ ನಂತರ 06-10ನೇ ತರಗತಿಗಳ ಪಠ್ಯ ಪುಸ್ತಕಗಳಲ್ಲಿ ತರಾತುರಿಯಲ್ಲಿ ಕೆಲವೊಂದು ಪಾಠಗಳನ್ನು ತೆಗೆದು ಹಾಕಿ ಅದಕ್ಕೆ ಬೇರೆ ಪಾಠಗಳನ್ನು ಸೇರಿಸಲಾಗಿದೆ. ಈ ಕುರಿತು ಸನ್ಮಾನ್ಯ ಮುಖ್ಯ ಮಂತ್ರಿಗಳು ಮಕ್ಕಳ ಮನಸ್ಸಿಗೆ ವಿಷತುಂಬುವ ಪಾಠಗಳನ್ನು ತೆಗೆದು ಹಾಕಲಾಗಿದೆ ಎಂದು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದಾರೆ. ಹೀಗಾಗಿ ಕಡಿತಗೊಳಿಸಿದ ಹಾಗೂ ಸೇರ್ಪಡೆಗೊಳಿಸಿದ ಪಠ್ಯವಸ್ತು ಹಾಗೂ ಅದರ ಪರಿಣಾಮಗಳ ಕುರಿತು ರಾಜ್ಯದ ಮಕ್ಕಳು ಹಾಗೂ ಪಾಲಕರು ಆತಂಕಗೊಂಡಿರುವರು. ರಾಜಕೀಯವಾಗಿ ಪಠ್ಯ ಪುಸ್ತಕ ಬದಲಾವಣೆಗೊಂಡಿದೆ ಎನ್ನುವ ವಿಷಯ ಸಾರ್ವಜನಿಕ ವಲಯದಲ್ಲಿ ಚರ್ಚೆಯಾಗುತ್ತಿರುವುದನ್ನು ಪ್ರಸ್ತಾಪಿಸುವುದು.

**ಉತ್ತರ :-**

2023-24 ನೇ ಸಾಲಿನ 6 ರಿಂದ 10ನೇ ತರಗತಿಯ ಪಠ್ಯಪುಸ್ತಕಗಳನ್ನು ಪರಿಶೀಲಿಸಿ ಆದೇಶ ಸಂಖ್ಯೆ: ಇಪಿ 151 ಪಿಎಂಸಿ 2023 ದಿನಾಂಕ: 17-06-2023ರಲ್ಲಿ ಅನುಬಂಧ 1,2 & 3ರಲ್ಲಿರುವ ಅಂಶಗಳನ್ನು ಅಳವಡಿಸಿ ತಿದ್ದೋಲೆಯ ರೂಪದಲ್ಲಿ ಸಿದ್ಧಪಡಿಸಿ ಕರ್ನಾಟಕ ಪಠ್ಯ ಪುಸ್ತಕ ಸಂಘದ ವೆಬ್‌ಸೈಟ್‌ನಲ್ಲಿ ಸಾಫ್ಟ್ ಪ್ರತಿಯನ್ನು ಅಳವಡಿಸಲಾಗಿದ್ದು, ಈ ತಿದ್ದೋಲೆ ರೂಪದ ಪುಸ್ತಕಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ತಾಲ್ಲೂಕು ಹಂತದಿಂದ ಶಾಲೆಗಳಿಗೆ ವಿತರಿಸಲಾಗಿದೆ. ಆದುದರಿಂದ ಈ ಬಗ್ಗೆ ಯಾವುದೇ ಚರ್ಚೆ ಹಾಗೂ ಸಮಸ್ಯೆ ಕಂಡುಬಂದಿರುವುದಿಲ್ಲ.

**ಇಪಿ 194 ಪಿಎಂಸಿ 2023**

(signature)

**(ಎಸ್. ಮಧು ಬಂಗಾರಪ್ಪ)**
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ**
**ಸಚಿವರು**